**ಭಾರತ ಸರ್ವೋಚ್ಚ ನ್ಯಾಯಾಲಯ**

ಕ್ರಿಮಿನಲ್ ಅಪೀಲು ವ್ಯಾಪ್ತಿ

**ಕ್ರಿಮಿನಲ್ ಅಪೀಲು ಸಂಖ್ಯೆ(ಗಳು): 1006/2010**

ಆನಂದ್ ರಾಮಚಂದ್ರ ಚೌಗುಲೆ . . . . . ಅಪೀಲುದಾರ(ರು)

–ವಿರುದ್ಧ–

ಸಿದರಾಯಿ ಲಕ್ಷ್ಮಣ್ ಚೌಗುಲ ಮತ್ತು ಇತರರು . . . . . ಪ್ರತ್ಯರ್ಜಿದಾರ(ರು)

ಇದರೊಂದಿಗೆ

**ಕ್ರಿಮಿನಲ್ ಅಪೀಲು ಸಂಖ್ಯೆ(ಗಳು): 1007/2010**

ಕರ್ನಾಟಕ ರಾಜ್ಯ . . . . . ಅಪೀಲುದಾರ(ರು)

–ವಿರುದ್ಧ–

ಸಿದರಾಯಿ ಲಕ್ಷ್ಮಣ್ ಚೌಗುಲ ಮತ್ತು ಇತರರು . . . . . ಪ್ರತ್ಯರ್ಜಿದಾರ(ರು)

**ತೀರ್ಪು**

**ನವೀನ್ ಸಿನ್ಹಾ**

ಪ್ರಸ್ತುತ ಎರಡು ಅಪೀಲುಗಳನ್ನು ಕ್ರಮವಾಗಿ ದೂರುದಾರ ಮತ್ತು ರಾಜ್ಯದಿಂದ ಹೂಡಲಾಗಿದೆ. ಇದರಲ್ಲಿ ಪ್ರತ್ಯರ್ಜಿದಾರ ಸಂಖ್ಯೆ: 3 ಮತ್ತು 4 ಇವರನ್ನು ಖುಲಾಸೆಗೊಳಿಸಿರುವ ಹಾಗೂ ಭಾರತ ದಂಡ ಸಂಹಿತೆ, 1860 (ಇದರಲ್ಲಿ ಇನ್ನು ಮುಂದೆ 'ಐಪಿಸಿ' ಎಂದು ಉಲ್ಲೇಖಿಸಲಾಗಿದೆ) 302/34ನೇ ಪ್ರಕರಣದ ಅಡಿಯಲ್ಲಿ ಜೀವಾವಧಿ ಶಿಕ್ಷೆಗೆ ಪ್ರತ್ಯರ್ಜಿದಾರ ಸಂಖ್ಯೆ: 1 ಮತ್ತು 2 ಇವರ ಅಪರಾಧ ನಿರ್ಣಯಿಸಿರುವುದರ ಬದಲಿಗೆ, ಅವರಿಗೆ ಏಳು ವರ್ಷಗಳ ಶಿಕ್ಷೆ ವಿಧಿಸಿ, ಭಾಗ–I/34ರ 304ನೇ ಪ್ರಕರಣದ ಅಡಿಯಲ್ಲಿ ಮಾರ್ಪಡಿಸಲಾಗಿರುವ ಉಚ್ಚ ನ್ಯಾಯಾಲಯದ ಆದೇಶಗಳನ್ನು ಪ್ರಶ್ನಿಸಲಾಗಿದೆ.

2. ದೂರುದಾರ ಮತ್ತು ಆಪಾದಿತ ಇಬ್ಬರೂ ಪರಸ್ಪರ ಸಂಬಂಧಿಕರಾಗಿದ್ದು, ಅವರ ನಡುವೆ ಭೂ ವಿವಾದವಿತ್ತು. ಒಂದು ಸಿವಿಲ್ ದಾವೆಯು ಸಹ ಇತ್ಯರ್ಥದಲ್ಲಿದೆ ಎಂದು ಹೇಳಲಾಗಿದೆ. ದಿನಾಂಕ: 07.06.2002ರಂದು, ಮೃತ ವ್ಯಕ್ತಿ ಇತರರೊಂದಿಗೆ ತಮ್ಮ ಗ್ರಾಮಕ್ಕೆ ಹಿಂದಿರುಗುತ್ತಿದ್ದರು. ಯಲ್ಲಪ್ಪ ಪಾಟೀಲ್ ಎಂಬಾತನ ಮನೆಯ ಬಳಿ ಅವರು ತಲುಪಿದಾಗ, ಆಪಾದಿತ ವ್ಯಕ್ತಿಗಳು ನರಹತ್ಯೆಯ ಮರಣಕ್ಕೆ ಎಡೆ ಮಾಡಿಕೊಡುವಂತೆ ಅವರ ಮೇಲೆ ಹಲ್ಲೆ ಮಾಡಿರುವರೆಂದು ಆರೋಪಿಸಲಾಗಿದೆ. ವಿಚಾರಣಾ ನ್ಯಾಯಾಲಯವು, ಎಲ್ಲ ನಾಲ್ವರು ಆಪಾದಿತರ ಶಿಕ್ಷೆಯನ್ನು ನಿರ್ಣಯಿಸಿದೆ. ಉಚ್ಚ ನ್ಯಾಯಾಲಯವು, ಪೂರ್ವಸಂಕಲ್ಪವಿಲ್ಲದೆ ಆ ಕ್ಷಣದ ಪ್ರಚೋದನೆಯಿಂದ ಹಲ್ಲೆಯನ್ನು ಮಾಡಲಾಗಿದೆ ಎಂದು ಹಾಗೂ ಎರಡು ಕಡೆಯವರಿಗೂ ಗಾಯಗಳಾಗಿದ್ದು, ಅಪರಾಧ ನಿರ್ಣಯವನ್ನು ಐಪಿಸಿಯ ಭಾಗ–Iರ 304ನೇ ಪ್ರಕರಣದ ಅಡಿಯಲ್ಲಿ ಬದಲಾಯಿಸಬೇಕಾಗಿತ್ತು ಎಂದು ದಾಖಲೆಯಲ್ಲಿನ ಸಾಕ್ಷ್ಯಗಳಿಂದ ಅಪೀಲನ್ನು ಕುರಿತು ನಿರ್ಣಯಿಸಿದೆ. ಆಪಾದಿತರ ಪೈಕಿ ಇಬ್ಬರ ಇರುವಿಕೆಯು ಸಂಶಯದಿಂದ ಕೂಡಿದೆ ಎಂದು ಕಂಡುಬಂದದ್ದರಿಂದ ಅವರನ್ನು ಖುಲಾಸೆಗೊಳಿಸಲಾಗಿದೆ.

3. ಐಪಿಸಿಯ ಭಾಗ–Iರ 304ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯವು ಅಪರಾಧ ನಿರ್ಣಯವನ್ನು ಬದಲಾಯಿಸುವಲ್ಲಿ ತಪ್ಪೆಸಗಿದೆ; ಹಲ್ಲೆಯು ಪೂರ್ವಸಂಕಲ್ಪಿತವಾಗಿತ್ತು; ಆಪಾದಿತರು ಕೊಡಲಿ, ಕೊಯ್ತು ಮತ್ತು ಬಿದಿರಿನ ಕೋಲುಗಳೊಂದಿಗೆ ಆಯುಧಸನ್ನದ್ದರಾಗಿದ್ದರು; ಪ್ರಾ.ಸಾ. 2 ಮತ್ತು 3 ಇವರು ಗಾಯಗೊಂಡ ಸಾಕ್ಷಿದಾರರಾಗಿದ್ದಾರೆ; ಆತ್ಮರಕ್ಷಣೆಯ ವಾದದ ಬೆಂಬಲಕ್ಕೆ ಅಥವಾ ಹತ್ಯೆಯು ಆ ಕ್ಷಣದ ಪ್ರಚೋದನೆಯಿಂದ ನಡೆಯಿತೆಂದು ಹೇಳುವುದಕ್ಕೆ ಯಾವುದೇ ಸಾಕ್ಷ್ಯವಿಲ್ಲ; ಆಪಾದಿತನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ಪ್ರತಿವಾದವನ್ನು ತೆಗೆದುಕೊಂಡಿರುವುದಿಲ್ಲ; ಪ್ರಾ.ಸಾ.4 ಮತ್ತು 5 ಇವರು ಸಹ ಪ್ರತ್ಯಕ್ಷ್ಯ ಸಾಕ್ಷಿದಾರರಾಗಿರುವರು; ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿನ

ಸಣ್ಣಪುಟ್ಟ ವಿರೋಧಾಭಾಸಗಳು ಮತ್ತು ವ್ಯತ್ಯಾಸಗಳು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂಶಯಗೊಳಿಸಲು ಸಾಕಷ್ಟಲ್ಲವೆಂದು ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. **ಉತ್ತರ ಪ್ರದೇಶ ರಾಜ್ಯ –ವಿರುದ್ಧ– ಫಕಿರೆ (2019) 5 ಎಸ್‌ಸಿಸಿ 605** ಈ ಮೊಕದ್ದಮೆಯನ್ನು ಅವಲಂಬಿಸಿ, ಅಪರಾಧ ನಿರ್ಣಯಕ್ಕೆ ಐಪಿಸಿಯ 302ನೇ ಪ್ರಕರಣವನ್ನು ಅವಲಂಬಿಸಬೇಕಾಗಿತ್ತೆಂದು ನಿವೇದಿಸಿಕೊಳ್ಳಲಾಗಿದೆ.

4. ಐಪಿಸಿಯ 302ನೇ ಪ್ರಕರಣದ ಅಡಿಯಲ್ಲಿ ಅಪರಾಧ ನಿರ್ಣಯವನ್ನು ಸಮರ್ಥಿಸುವ ಹಠಾತ್ ಕಲಹ ಅಥವಾ ಜಗಳದಲ್ಲಿ ಪ್ರಚೋದನೆಯಿಲ್ಲದೆ, ತಲೆಯ ಮೇಲಿನ ಹಲ್ಲೆ ಮಾತ್ರವೇ ಮರಣ ಕಾರಣಕ್ಕೆ ಪರ್ಯಾಪ್ತವಾಗಿದೆ ಎಂಬ ನಿವೇದನೆಯ ಸಮರ್ಥನೆಯಲ್ಲಿ, **ಪುಲಿಚೆರ್ಲಾ ನಾಗರಾಜು –ವಿರುದ್ಧ– ಆಂಧ್ರ ಪ್ರದೇಶ ರಾಜ್ಯ,** (2006) 11 ಎಸ್‌ಸಿಸಿ 444 ಮತ್ತು ಕಾರ್ಯದರ್ಶಿ ಮುಖಾಂತರ **ರಾಜಸ್ಥಾನ ರಾಜ್ಯ –ವಿರುದ್ಧ– ಕನ್ಹಯ್ಯ ಲಾಲ್** (2009) 5 ಎಸ್‌ಸಿಸಿ 639 ಈ ಮೊಕದ್ದಮೆಗಳನ್ನು ಅವಲಂಬಿಸಲಾಗಿದೆ. ಅಲ್ಲದೆ, ಈ ನ್ಯಾಯಾಲಯವು ಐಪಿಸಿಯ ಭಾಗ–Iರ 304ನೇ ಪ್ರಕರಣದ ಅಡಿಯಲ್ಲಿ ಅಪರಾಧ ನಿರ್ಣಯವನ್ನು ಎತ್ತಿಹಿಡಿದಿದ್ದರೂ ಸಹ, ಶಿಕ್ಷೆಯನ್ನು ಹತ್ತು ವರ್ಷಗಳವರೆಗೆ ವಿಸ್ತರಿಸಬೇಕಾಗಿತ್ತು ಎಂದು ನಿವೇದಿಸಲು, **ವಿಜಯ್ ರಾಮಕ್ರಿಷನ್ ಗಾಯಕ್‌ವಾಡ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ ಮತ್ತು ಇನ್ನೊಬ್ಬರು,** (2012) 11 ಎಸ್‌ಸಿಸಿ 592 ಈ ಮೊಕದ್ದಮೆಯನ್ನು ಅವಲಂಬಿಸಲಾಗಿದೆ.

5. **ರಾಜ್ ಕುಮಾರ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ,** (2009) 15 ಎಸ್‌ಸಿಸಿ 292 ಈ ಮೊಕದ್ದೆಮಯನ್ನವಲಂಬಿಸಿ, ಆರೋಪಿಗಳು ಆತ್ಮರಕ್ಷಣೆಯ ವಾದವನ್ನು ಮಂಡಿಸಿದ್ದರೆ, ಐಪಿಸಿಯ ಅಡಿಯಲ್ಲಿನ ಯಾವುದೇ ಸಾಮಾನ್ಯ ವಿನಾಯಿತಿ ಅಡಿಯಲ್ಲಿ ತಮ್ಮ ಮೊಕದ್ದಮೆಯು ಬರುತ್ತದೆಂದು

ತೋರಿಸಲು, ಭಾರತ ಸಾಕ್ಷ್ಯ ಅಧಿನಿಯಮ, 1872ರ 105ನೇ ಪ್ರಕರಣದ ಅಡಿಯಲ್ಲಿ ಅವರ ಮೇಲೆ ಸಾಬೀತುಪಡಿಸುವ ಹೊಣೆ ಇತ್ತು ಎಂದು ನಿವೇದಿಸಿಕೊಳ್ಳಲಾಗಿದೆ.

6. ಅದೇ ಘಟನೆಗೆ ಸಂಬಂಧಿಸಿದಂತೆ ಆಪಾದಿತನು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದರೆ, ಆಸ್ಪತ್ರೆಗೆ ಸೇರಿಸುವ ಸಂಬಂಧದಲ್ಲಿ ಪ್ರಾಸಿಕ್ಯೂಷನ್ ಅಥವಾ ಸಾಕ್ಷ್ಯದ ಮೂಲಕ ಅದನ್ನು ಪ್ರದರ್ಶಿಸಿರುವುದಿಲ್ಲ ಹಾಗೂ ಆಪಾದಿತನ ಗಾಯದ ವರದಿಗಳನ್ನು ಸಹ ಮಂಡಿಸಿರುವುದಿಲ್ಲ. **ದಯಾಳ್ ಸಿಂಗ್ ಮತ್ತು ಇತರರು –ವಿರುದ್ಧ– ಉತ್ತರಾಂಚಲ ರಾಜ್ಯ,** (2012) 8 ಎಸ್‌ಸಿಸಿ 263 ಮತ್ತು **ಗಜೂ –ವಿರುದ್ಧ– ಉತ್ತರಾಖಂಡ ರಾಜ್ಯ** (2012) 9 ಎಸ್‌ಸಿಸಿ 532 ಈ ಮೊಕದ್ದಮೆಗಳನ್ನವಲಂಬಿಸಿ, ಹೆಚ್ಚೆಂದರೆ ಅದು ದೋಷಯುಕ್ತ ತನಿಖೆಯ ಮೊಕದ್ದಮೆಯಾಗಿರಬಹುದಾದರೂ, ಸಾಮಾನ್ಯ ಉದ್ದೇಶದೊಂದಿಗೆ ಪೂರ್ವಸಂಕಲ್ಪಿತ ಮಾರಕ ಹಲ್ಲೆಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಮೊಕದ್ದಮೆಯ ವಿಶ್ವಾಸಾರ್ಹತೆಯ ಮೇಲೆ ಪರಿಣಾಮ ಬೀರಲಾಗುವುದಿಲ್ಲ ಎಂದು ನಿವೇದಿಸಿಕೊಳ್ಳಲಾಗಿದೆ.

7. ಪೂರ್ವಸಂಕಲ್ಪಿತ ಹಲ್ಲೆ ನಡೆದಿಲ್ಲ; ಪಕ್ಷಕಾರರು ಸಂಬಂಧಿಗಳಾಗಿದ್ದಾರೆ ಮತ್ತು ಅವರ ನಡುವೆ ಭೂ ವಿವಾದವಿತ್ತು, ಅವರು ಯಲ್ಲಪ್ಪ ಪಾಟೀಲ್ ಎಂಬಾತನ ಮನೆಯ ಬಳಿ ಸಂಧಿಸಿದಾಗ, ಪರಸ್ಪರ ಮಾತುಗಳಿಂದ ನಿಂದಿಸಿಕೊಂಡಿರುವುದು ಖಚಿತ, ಅದನ್ನನುಸರಿಸಿ ಹೊಡೆದಾಟವಾಗಿದ್ದು, ಎರಡು ಕಡೆಯವರಿಗೂ ಗಾಯಗಳುಂಟಾಗಿವೆ; ಪ್ರತ್ಯರ್ಜಿದಾರರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಅವರ ದಾಖಲಾತಿ ಮತ್ತು ಗಾಯದ ವರದಿಗಳನ್ನು ಪ್ರಾಸಿಕ್ಯೂಷನ್‌ರವರು ಮರೆಮಾಚಿದ್ದಾರೆ; ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಪ್ರತಿವಾದವನ್ನು ಮಂಡಿಸಲಾಗುತ್ತಿರಲಿಲ್ಲವೆಂಬ ಸಂಗತಿಯು, ಪ್ರಾಸಿಕ್ಯೂಷನ್‌ರವರು ಸಂದೇಹಾತೀತವಾಗಿ ಆರೋಪವನ್ನು ಸಾಬೀತುಪಡಿಸಬೇಕಾಗಿದ್ದರಿಂದ, ಅಸಂಗತವಾಗಿದೆ ಎಂದು ಪ್ರತ್ಯರ್ಜಿದಾರ–ಆಪಾದಿತರ ಪರ ಮಾನ್ಯ

ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ಪ್ರಾಸಿಕ್ಯೂಷನ್ ಸಂಶಯಾತೀತವಾಗಿ ಆರೋಪವನ್ನು ಸಾಬೀತುಪಡಿಸಬೇಕಾಗಿತ್ತಾದ್ದರಿಂದ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಪ್ರತಿವಾದವನ್ನು ಮಂಡಿಸಬಹುದೆಂಬುದು ವಾಸ್ತವ. ಪಕ್ಷಕಾರರ ನಡುವೆ ಭೂಮಿಗೆ ಸಂಬಂಧಿಸಿದ ಸಿವಿಲ್ ವಿವಾದ ಇತ್ಯರ್ಥದಲ್ಲಿದ್ದ ಹಿನ್ನಲೆಯಲ್ಲಿ ಹಠಾತ್ ಕಲಹವಾಗಿದ್ದು, ಹಲ್ಲೆ ಮಾಡುವ ಪೂರ್ವಸಂಕಲ್ಪಿತ ಯೋಜನೆ ಇರಲಿಲ್ಲವೆಂದು ನಿವೇದಿಸಲು **ಮನೋಜ್ ಕುಮಾರ್ –ವಿರುದ್ಧ– ಹಿಮಾಚಲ ಪ್ರದೇಶ ರಾಜ್ಯ,** (2018) 7 ಎಸ್‌ಸಿಸಿ 327 ಈ ಮೊಕದ್ದಮೆಯನ್ನು ಅವಲಂಬಿಸಲಾಗಿದ್ದು, ಉಚ್ಚ ನ್ಯಾಯಾಲಯದ ಆದೇಶದಲ್ಲಿ ಹಸ್ತಕ್ಷೇಪದ ಅವಶ್ಯಕತೆಯಿಲ್ಲವೆಂದು ನಿವೇದಿಸಿದ್ದಾರೆ.

8. ಸಂಬಂಧಪಟ್ಟ ನಿವೇದನೆಗಳನ್ನು ನಾವು ಪರಿಗಣಿಸಿದ್ದೇವೆ ಮತ್ತು ದಾಖಲೆಯಲ್ಲಿನ ಸಾಕ್ಷ್ಯಗಳನ್ನು ಅವಲೋಕಿಸಿದ್ದೇವೆ. ಪಕ್ಷಕಾರರ ನಡುವಿನ ಸಂಬಂಧ ಮತ್ತು ಸಿವಿಲ್ ದಾವೆ ಇತ್ಯರ್ಥದಲ್ಲಿರುವುದಕ್ಕೆ ಸಂಬಂಧಿಸಿದಂತೆ ಭೂ ವಿವಾದವಿರುವುದು ಸಹ ಅವಿವಾದಿತ ಸಂಗತಿಗಳಾಗಿವೆ. ಗಾಯಗಳಲ್ಲಿ ಪರಿಸಮಾಪ್ತಿಯಾದ ಪಕ್ಷಕಾರರ ನಡುವೆ ಸಂಭವಿಸಿದ ಪರಸ್ಪರ ಮಾತಿನ ನಿಂದನೆ ಮತ್ತು ಅದನ್ನನುಸರಿಸಿ ಹೊಡೆದಾಟವಾಗಿದೆ ಎಂದು ಎರಡು ನ್ಯಾಯಾಲಯಗಳು ಸಂಗತಿಯ ಸಮವರ್ತಿ ನಿರ್ಣಯಕ್ಕೆ ಬಂದಿವೆ ಎಂಬುದು ವಾಸ್ತವ. ಅದೇ ಘಟನೆಗೆ ಸಂಬಂಧಿಸಿದಂತೆ ಆಪಾದಿತನು ಸಹ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದಾನೆ ಎಂಬ ಸಂಗತಿಯು, ತನಿಖಾಧಿಕಾರಿಗಳಾದ ಪ್ರಾಸಾ. 19 ಮತ್ತು 22 ಇವರ ಸಾಕ್ಷ್ಯದಿಂದ ಸಾಬೀತಾಗಿದೆ ಮತ್ತು ನಿಶಾನೆ ಡಿ–10 ಎಂದು ಗುರುತಿಸಲಾಗಿರುವ ಬಿಆರ್‌ಪಿಎಸ್ ಸಿಆರ್. ಸಂಖ್ಯೆ: 79/02ನ್ನು ಪ್ರತಿವಾದಿ–ಆಪಾದಿತರು ಸಹ ದಾಖಲಿಸಿದ್ದು, ಅದನ್ನು ಅವರು ತನಿಖೆ ಮಾಡಿಲ್ಲವೆಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಹಾಗೆಯೇ, ಪ್ರಾಸಾ.11–ಪೊಲೀಸ್ ಕಾನ್‌ಸ್ಟೇಬಲ್ ಇವರು, ಬೆಳಗಾವಿಯ ಜಿಲ್ಲಾ ಆಸ್ಪತ್ರೆಗೆ ಇಬ್ಬರು ಆರೋಪಿಗಳನ್ನು ಸೇರಿಸಲಾಗಿತ್ತು ಮತ್ತು ತನ್ನನ್ನು ಪಹರೆ ಕರ್ತವ್ಯಕ್ಕೆ

ನಿಯೋಜಿಸಲಾಗಿತ್ತು ಎಂದು ಒಪ್ಪಿಕೊಂಡಿದ್ದಾರೆ. ಈ ಘಟನೆಯು ದಿನಾಂಕ: 07.06.2002ರಂದು ಸಂಭವಿಸಿದ್ದು, ಪ್ರತಿವಾದಿ–ಆಪಾದಿತ ಸಂಖ್ಯೆ: 1 ಮತ್ತು 2 ಇವರನ್ನು ದಿನಾಂಕ: 11.06.2002ರಂದು ಬಿಡುಗಡೆ ಮಾಡಲಾಗಿದೆ. ಅವರ ಗಾಯದ ವರದಿಯನ್ನು ಪ್ರಾಸಿಕ್ಯೂಷನ್ ದಾಖಲೆಗೆ ತಂದಿರುವುದಿಲ್ಲ ಮತ್ತು ಈ ಬಗ್ಗೆ ಯಾವುದೇ ವಿವರಣೆಯನ್ನು ಸಹ ನೀಡಿರುವುದಿಲ್ಲ.

9. ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸುವ ಹೊಣೆ ಪ್ರಾಸಿಕ್ಯೂಷನ್‌ದ್ದಾಗಿದೆ. ಇದಕ್ಕೆ ತದ್ವಿರುದ್ಧವಾಗಿ, ಆರೋಪಿಯು ಪ್ರಾಸಿಕ್ಯೂಷನ್ ಮೊಕದ್ದಮೆಯ ಬಗ್ಗೆ ಸಂಶಯವನ್ನು ಮತ್ತು ಅದರ ಪ್ರತಿವಾದದ ಸಂಭಾವ್ಯತೆಯನ್ನು ಕುರಿತು ಸಂಶಯವನ್ನು ಮಾತ್ರ ಹುಟ್ಟುಹಾಕಿದ್ದಾನೆ, ಪ್ರಾಸಿಕ್ಯೂಷನ್‌ನಂತಲ್ಲದೆ, ಆರೋಪಿಯು ಸಂಶಯಾತೀತವಾಗಿ ತನ್ನ ಪ್ರತಿವಾದವನ್ನು ಸಾಬೀತುಪಡಿಸುವ ಅಥವಾ ರುಜುವಾತುಪಡಿಸುವ ಅಗತ್ಯವಿಲ್ಲ. ಆರೋಪಿಯು ಪ್ರತಿವಾದವನ್ನು ಮಂಡಿಸಿದರೆ, ಅದು ಅಸಂಭವವಾಗಿರುವುದಿಲ್ಲ ಮತ್ತು ಹಾಗೆ ಕಂಡುಬರುತ್ತದೆ, ಅಂಥ ಪ್ರತಿವಾದದ ಸಮರ್ಥನೆಯಲ್ಲಿ ಸಾಕ್ಷ್ಯವಿರುತ್ತದೆ, ಆರೋಪಿಯು ಇನ್ನು ಹೆಚ್ಚಿನ ಏನನ್ನು ಸಾಬೀತುಪಡಿಸುವ ಅಗತ್ಯವಿರುವುದಿಲ್ಲ. ಪ್ರಾಸಿಕ್ಯೂಷನ್ ಅದರ ಮೊಕದ್ದಮೆಯನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಮರ್ಥವಾಗದ ಹೊರತು, ಸಂಶಯದ ಲಾಭವನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

10. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಅಡಿಯಲ್ಲಿ ಆರೋಪಿಯು ಪ್ರತಿವಾದವನ್ನು ಕೈಕೊಳ್ಳಬಹುದಾಗಿರುವುದಿಲ್ಲ ಎಂಬುದು ವಾಸ್ತವ; ಆಗಲೂ ಪ್ರಾಸಿಕ್ಯೂಷನ್ ಸಂಶಯಾತೀತವಾಗಿ ಅದರ ಮೊಕದ್ದಮೆಯನ್ನು ಸಾಬೀತುಪಡಿಸುವುದರಿಂದ ವಿಮುಕ್ತಗೊಳ್ಳಲಾಗುವುದಿಲ್ಲ. ಪ್ರಾಸಿಕ್ಯೂಷನ್ ಉತ್ತರಿಸಲು ಅಸಮರ್ಥವಾಗಿರುವ ಸಾಕ್ಷ್ಯವಿದ್ದರೆ, ಮಂಡಿಸಿದ ಪ್ರತಿವಾದದಲ್ಲಿನ ದೌರ್ಬಲ್ಯವು, ಆ ಸಂದರ್ಭಗಳಲ್ಲಿ ಅದು ಏನನ್ನೂ ರುಜುವಾತುಪಡಿಸುವ ಅಗತ್ಯವಿರಲಿಲ್ಲವೆಂದು ಕ್ಲೇಮು ಮಾಡಲು ಅದು

ಪ್ರಾಸಿಕ್ಯೂಷನ್‌ನ ಸಾಮರ್ಥ್ಯವಾಗಲು ಸಾಧ್ಯವಿಲ್ಲ. **ಸುನೀಲ್ ಕುಂದು –ವಿರುದ್ಧ– ಜಾರ್ಖಂಡ್ ರಾಜ್ಯ,** (2013) 4 ಎಸ್‌ಸಿಸಿ 422 ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "28. . . . . . . . . ಸಂಶಯಾತೀತವಾಗಿ ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ರುಜುವಾತುಪಡಿಸಲು ಅದು ಸಮರ್ಥವಾಗದಿದ್ದಾಗ, ತಮ್ಮ ಪ್ರತಿವಾದವನ್ನು ಸಂಭಾವ್ಯತೆಗೊಳಿಸಲು ಆರೋಪಿಗಳು ಸಮರ್ಥರಾಗಿಲ್ಲವೆಂಬ ಸಂಗತಿಯ ಪ್ರಯೋಜನವನ್ನು ಅದು ಪಡೆದುಕೊಳ್ಳಲಾಗುವುದಿಲ್ಲ. ಪ್ರಾಸಿಕ್ಯೂಷನ್ ತನ್ನ ನಿಲುವನ್ನು ಸಾಬೀತುಪಡಿಸಬೇಕು ಇಲ್ಲವೇ ಹಿಂತೆಗೆಯಬೇಕು ಎಂಬುದು ಇತ್ಯರ್ಥವಾದ ಸಂಗತಿ. ಅದರ ಮೊಕದ್ದಮೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸದಿದ್ದರೆ, ಆರೋಪಿಯ ಮೊಕದ್ದಮೆಯ ದೌರ್ಬಲ್ಯದಿಂದ ಅದು ಬೆಂಬಲವನ್ನು ಪಡೆಯಲಾಗುವುದಿಲ್ಲ."

11. ಅದೇ ಘಟನೆಗೆ ಸಂಬಂಧಿಸಿದಂತೆ ಆರೋಪಿಯು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿದ್ದು, ಅದನ್ನು ಕುರಿತು ಏಕೆ ತನಿಖೆ ಮಾಡಿರುವುದಿಲ್ಲ ಎಂಬುದನ್ನು ವಿವರಿಸುವಲ್ಲಿ ಪೊಲೀಸರ ವಿಫಲತೆಯು, ಅದೇ ಘಟನೆಯಲ್ಲಿ ಉಂಟಾದ ಗಾಯಗಳಿಗೆ ಸಂಬಂಧಿಸಿದಂತೆ ಆರೋಪಿಗಳು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರೆಂಬ ಸಂಗತಿಯನ್ನು ಒಪ್ಪಿಕೊಳ್ಳುವುದರೊಂದಿಗೆ ಸೇರಿಕೊಂಡಿದೆ; ಆದರೆ ಗಾಯದ ವರದಿಯನ್ನು ದಾಖಲೆಗೆ ತಂದಿರಲಿಲ್ಲ ಮತ್ತು ಪ್ರಾಸಿಕ್ಯೂಷನ್ ಅದನ್ನು ಮರೆಮಾಚಿತ್ತು ಎಂಬುದು ಸಾಕಷ್ಟು ಸಂಶಯಗಳನ್ನು ಹುಟ್ಟುಹಾಕುತ್ತಿದ್ದು, ಅದಕ್ಕೆ ಉತ್ತರಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂಬುದು ವಾಸ್ತವ.

12. ಅದೇ ಘಟನೆಗೆ ಸಂಬಂಧಿಸಿದಂತೆ ಆರೋಪಿಯು ದಾಖಲಿಸಿದ ಪ್ರಥಮ ಮಾಹಿತಿ ವರದಿಯನ್ನು ಕುರಿತು ತನಿಖೆ ಮಾಡಲು ಅಥವಾ ದಾಖಲೆಯಲ್ಲಿ ಗಾಯದ ವರದಿಗಳನ್ನು ತರಲು ಪ್ರಾಸಿಕ್ಯೂಷನ್‌ನ ವಿಫಲತೆಯು ಕೇವಲ ದೋಷಪೂರ್ಣ ತನಿಖೆ ಎಂದು ಅಪೀಲುದಾರರ ಪರವಾಗಿ ನಿವೇದಿಸಿಕೊಂಡಿರುವುದರೊಂದಿಗೆ ಸಹಮತಿ ಹೊಂದಲು ಕಷ್ಟವೆಂಬುದು ನಮ್ಮ ನಿರ್ಣಯವಾಗಿದೆ.

ನಿಷ್ಪಕ್ಷಪಾತವಾಗಿ ನಡೆದುಕೊಳ್ಳಲು ಹಾಗೂ ನ್ಯಾಯಸಮ್ಮತವಾಗಿ ಮತ್ತು ನಿಷ್ಪಕ್ಷಪಾತವಾಗಿ ತೀರ್ಮಾನ ಕೈಗೊಳ್ಳಲು ಪ್ರಾಸಿಕ್ಯೂಷನ್‌ಅನ್ನು ಸಮರ್ಥಗೊಳಿಸಿ ನ್ಯಾಯಾಲಯದ ಮುಂದೆ ಘಟನೆಗೆ ಸಂಬಂಧಿಸಿದ ಎಲ್ಲಾ ಸುಸಂಗತ ಸಾಕ್ಷ್ಯಗಳನ್ನು ಮಂಡಿಸಲು ಅದರ ವಿಫಲತೆಯು ಅವರಿಗೆ ಗಂಭೀರ ಪ್ರತಿಕೂಲವನ್ನುಂಟು ಮಾಡಿದೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ನಿಷ್ಪಕ್ಷಪಾತವಾದ ಕ್ರಿಮಿನಲ್ ವಿಚಾರಣೆಯು, ವಿಚಾರಣಾ-ಪೂರ್ವ ಹಂತದಲ್ಲಿ ನಿಷ್ಪಕ್ಷಪಾತವಾದ ತನಿಖೆಯನ್ನು ಹಾಗೂ ಪ್ರಾಸಿಕ್ಯೂಷನ್, ನ್ಯಾಯಾಲಯದಿಂದ ಏನನ್ನೂ ಬಚ್ಚಿಡದ ಮತ್ತು ಶಿಕ್ಷೆಯನ್ನು ವಿಧಿಸುವಲ್ಲಿ ಸಹ ನಿಷ್ಪಕ್ಷಪಾತವಾಗಿ ಕೊನೆಗೊಳ್ಳುವ ನ್ಯಾಯದ ಬಹು ದೊಡ್ಡ ಹಿತಾಸಕ್ತಿಯಲ್ಲಿ ನ್ಯಾಯಾಲಯವು ನ್ಯಾಯಯುತ ಮತ್ತು ಸೂಕ್ತ ತೀರ್ಮಾನವನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಕಾನೂನಿಗನುಸಾರವಾಗಿ ಅದರ ಬಾಧ್ಯತೆಗಳನ್ನು ನಿರ್ವಹಿಸುವ ನಿಷ್ಪಕ್ಷಪಾತ ವಿಚಾರಣೆಯನ್ನು ಒಳಗೊಂಡಿರುತ್ತದೆ. **ದಯಾಳ್ ಸಿಂಗ್ (ಮೇಲೆ ಹೇಳಿದ)** ಮೊಕದ್ದಮೆಯಲ್ಲಿನ ಅಭಿಪ್ರಾಯಗಳು ಈ ಮುಂದಿನಂತೆ ಸುಸಂಗತವಾಗಿವೆ:

> "22. ಪ್ರಸ್ತುತ ಮೊಕದ್ದಮೆಯು ಸಹ ಬೇಜವಾಬ್ದಾರಿಯುತ ತನಿಖೆಯ ಜ್ವಲಂತ ಉದಾಹರಣೆಯಾಗಿದೆ. ವಾಸ್ತವದಲ್ಲಿ, ಇದು ತನಿಖೆಯನ್ನು ತಪ್ಪು ದಾರಿಗೆ ಎಳೆಯುವ ಉದ್ದೇಶಪೂರ್ವಕ ಕುಚೇಷ್ಟೆಯ ಪ್ರಯತ್ನವಾಗಿದೆಯಷ್ಟೇ ಅಲ್ಲದೆ, ನ್ಯಾಯಾಲಯದಿಂದ ಮುಖ್ಯ ಪುರಾವೆಯನ್ನು ತಡೆಹಿಡಿಯುವ ಪ್ರಯತ್ನವೂ ಆಗಿದೆ. ಇದನ್ನು ನಿಷ್ಕಪಟ ಅಥವಾ ಉದ್ದೇಶಪೂರ್ವಕವಲ್ಲದ ಲೋಪ ಅಥವಾ ಕೃತ್ಯದ ಪ್ರಕರಣವೆಂದು ಪರಿಗಣಿಸಲಾಗುವುದಿಲ್ಲ. ಇದು ನಿರುಪಾಧಿಕವಾಗಿ ದೋಷಯುಕ್ತ ತನಿಖೆಯ ಪ್ರಕರಣವಾಗಿರದೆ, ಉದ್ದೇಶಸಹಿತವಾದ ಪೂರ್ವಗ್ರಹಿತ ತನಿಖೆಯಾಗಿದೆ ಅಥವಾ ಸಂದೇಹವು ಶಿಕ್ಷೆ ಮುಕ್ತವಾಗಿರುವಂತೆ ಖಚಿತಪಡಿಸಿಕೊಳ್ಳುವ ಪ್ರಯತ್ನವಾಗಿದೆ..........."

13. ಭಾರತ ಸಾಕ್ಷ್ಯ ಅಧಿನಿಯಮ, 1872ರ 105ನೇ ಪ್ರಕರಣದ ಅಡಿಯಲ್ಲಿ ಪ್ರತಿವಾದ ಕುರಿತ ರುಜುವಾತಿನ ಹೊಣೆಗೆ ಸಂಬಂಧಿಸಿದ ವಾದಾಂಶಕ್ಕೆ, **ಪ್ರತಾಪ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ,** (1976) 2 ಎಸ್‌ಸಿ 798 ಈ ಮೊಕದ್ದಮೆಯಲ್ಲಿ ಅತ್ಯುತ್ತಮವಾಗಿ ಉತ್ತರಿಸಲಾಗಿದ್ದು, ಅದರಲ್ಲಿನ ಅಭಿಪ್ರಾಯವು ಈ ಮುಂದಿನಂತಿದೆ:

> "14. ನಾವು ಅಧೀನ ನ್ಯಾಯಾಲಯಗಳ ತೀರ್ಪುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. ನಮ್ಮ ಅಭಿಪ್ರಾಯದಲ್ಲಿ, ಆತ್ಮ–ರಕ್ಷಣೆಯ ವಾದದ ಸಂಬಂಧದಲ್ಲಿನ ಅವರ ನಿರ್ಣಯವು ಸ್ಪಷ್ಟವಾಗಿ ತಪ್ಪಾದುದಾಗಿದೆ. ಆತ್ಮ–ರಕ್ಷಣೆಯ ವಾದವನ್ನು ಸಾಬೀತುಪಡಿಸಲು ಸಾಕ್ಷ್ಯ ಅಧಿನಿಯಮದ 105ನೇ ಪ್ರಕರಣದ ಅಡಿಯಲ್ಲಿ ಆರೋಪಿಯ ಮೇಲೆ ಇರುವ ಹೊಣೆಯ ಮತ್ತು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ರುಜುವಾತುಪಡಿಸಲು 101ನೇ ಪ್ರಕರಣವು ಅದರ ಮೇಲೆ ಹೊರಿಸಿದ ಹೊಣೆಯ ಸ್ವರೂಪದ ನಡುವಿನ ವ್ಯತ್ಯಾಸವನ್ನು ಅವರು ಗಮನಿಸಿರುವುದಿಲ್ಲವೆಂದು ಕಂಡುಬರುತ್ತದೆ. ಪ್ರಾಸಿಕ್ಯೂಷನ್ ಮೇಲಿರುವ ಹೊಣೆಗೆ ಹೋಲಿಸಿದಾಗ, ಆರೋಪಿಯ ಮೇಲಿನ ಹೊಣೆಯು ಗುರುತರವಾದ ಹೊಣೆಯಾಗಿರುವುದಿಲ್ಲ. ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸುವುದು ಅದಕ್ಕೆ ಅತ್ಯಗತ್ಯವಾಗಿದ್ದು, ಆರೋಪಿಯು ಸಂಭಾವ್ಯತೆಯ ಬಾಹುಳ್ಯವನ್ನು ಮಾತ್ರವೇ ಸಾಬೀತುಪಡಿಸುವ ಮೂಲಕ ತನ್ನ ಹೊಣೆಯನ್ನು ನಿರ್ವಹಿಸಬಹುದಾಗಿದೆ."

14. **ದಯಾಳ್ ಸಿಂಗ್** (ಮೇಲೆ ಹೇಳಿದ) ಮೊಕದ್ದಮೆಯು, ತನಿಖೆ ಕೈಗೊಳ್ಳಲು ವಿಫಲಗೊಂಡುದುದಕ್ಕೆ ಹೆಚ್ಚುವರಿಯಾಗಿ ವಿಚಾರಣಾ ಅವಧಿಯಲ್ಲಿ ಆರೋಪಿಗೆ ಸಂಬಂಧಿಸಿದ ಸಾಕ್ಷ್ಯವನ್ನು ಅಡಗಿಸುವುದಕ್ಕೆ ಸಂಬಂಧಿಸಿದ ಮೊಕದ್ದಮೆಯಾಗಿರುವುದರಿಂದ ಅದರದೇ ಆದ ಸಂಗತಿಗಳಿಂದ ವಿಭಿನ್ನವಾದುದೆಂದು ಗುರುತಿಸಬಹುದಾಗಿದ್ದಾಗಿದೆ. ದೋಷಯುಕ್ತ ತನಿಖೆಯು, ಒಂದೇ ಘಟನೆಗೆ ಸಂಬಂಧಿಸಿದ ಮತ್ತೊಂದು

ಪ್ರಥಮ ಮಾಹಿತಿ ವರದಿಯಿಂದ ಉದ್ಭವಿಸುವ ಗಾಯದ ವರದಿಯನ್ನು ಅಡಗಿಸಿಡುವುದರೊಂದಿಗೆ ಸಂಬಂಧಿಸಿರುವ ತನಿಖೆಯೇ ನಡೆಯದೆ ಇರುವುದರಿಂದ ಸಂಪೂರ್ಣವಾಗಿ ಬೇರೆಯದೇ ಆಗಿದೆ.

15. **ಗಜ್ಞೂ.** (ಮೇಲೆ ಹೇಳಿದ) ಮೊಕದ್ದಮೆಯು ಸೀರಮ್ ತಜ್ಞ (ಸೆರೋಲಾಜಿಸ್ಟ್) ವರದಿಯನ್ನು ಪಡೆಯುವಲ್ಲಿನ ವಿಫಲತೆಗೆ ಮಾತ್ರ ಸಂಬಂಧಿಸಿರುವುದರಿಂದ ಅದು ಸಹ ಅದರ ಸಂಗತಿಗಳ ಕಾರಣದಿಂದ ವಿಭಿನ್ನವಾದ ಮೊಕದ್ದಮೆಯಾಗಿದೆ.

16. ಪ್ರಾಸಾ.5 ಅಷ್ಟೇ ಅಲ್ಲದೆ ಪ್ರಾಸಾ.2 ಮತ್ತು 3 ಇವರ ಸಾಕ್ಷ್ಯವನ್ನು ಪರಿಗಣಿಸಿದ ನಂತರ ಸಂಶಯದ ಲಾಭವನ್ನು ಆರೋಪಿ ಸಂಖ್ಯೆ 3 ಮತ್ತು 4 ಇವರಿಗೆ ನೀಡಿ ಉಚ್ಚ ನ್ಯಾಯಾಲಯವು ಅವರನ್ನು ಖುಲಾಸೆಗೊಳಿಸಿರುವುದರಲ್ಲಿ ಸಹ ನಾವು ತಪ್ಪು ಕಂಡುಹಿಡಿಯಲಾಗುವುದಿಲ್ಲ.

17. ಆದುದರಿಂದ, ಉಚ್ಚ ನ್ಯಾಯಾಲಯದ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಕಾರಣವು ನಮಗೆ ಕಂಡುಬರುತ್ತಿಲ್ಲ. ಅಪೀಲುಗಳನ್ನು ವಜಾಗೊಳಿಸಲಾಗಿದೆ.

**--------------- ನ್ಯಾಯಮೂರ್ತಿ,**
**[ಅಶೋಕ್ ಭೂಷಣ್]**

**---------------- ನ್ಯಾಯಮೂರ್ತಿ,**
[ನವೀನ್ ಸಿನ್ಹ]

**ನವ ದೆಹಲಿ,**
**ಆಗಸ್ಟ್ 06, 2019.**

**ಕ್ಲೇಮು ನಿರಾಕರಣೆ**

**“**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**”**